# ಅಪೊಸ್ತಲಿಕ ಚರಿತ್ರೆ

## ಅಥವಾ, ಸಭೆಯ ಸ್ಥಾಪನೆ ಮತ್ತು ವಿಸ್ತರಣೆ, ಕ್ರಿ.ಶ. 30-100[1]

### ಪೀಠಿಕೆ.

**1. ಅಪೊಸ್ತಲಿಕ ಇತಿಹಾಸದ ಮೂಲಗಳು.**-ಇವುಗಳಾಗಿರುತ್ತವೆ, -

*a. ಅಪೊಸ್ತಲರ ಕೃತ್ಯಗಳ ಗ್ರಂಥ.*-ಗ್ರಂಥಕರ್ತನು ಮೂರನೆಯ ಸುವಾರ್ತೆಯನ್ನು ಬರೆದಿರುವನು (ಹೋಲಿಸು ಅಪೊಸ್ತಲರ ಕೃತ್ಯಗಳು 1:1; ಲೂಕ 1:1-4). ಅವನು ಪೌಲನ ಪ್ರಯಾಣದಲ್ಲಿ ಜೊತೆಗಾರನಾಗಿದ್ದನು. ಅಪೊಸ್ತಲರ ಕೃತ್ಯಗಳು 16:10; 20:6 ಮತ್ತು ಇತರ "ನಾವು" ವಾಕ್ಯಭಾಗಗಳನ್ನು ನೋಡಿರಿ, ನಾವು ಪೌಲನ ಪತ್ರಿಕೆಗಳಿಂದ (ಕೊಲೊಸ್ಸೆ 4:14; 2 ತಿಮೊಥೆ 4:11; ಫಿಲೆಮೋನ 23, 24) ಲೂಕನು ಅವನ ಜೊತೆಕೆಲಸದವರಲ್ಲಿ ಒಬ್ಬನಾಗಿದ್ದನು ಎಂಬುದನ್ನು ನಾವು ತಿಳಿದಿದ್ದೇವೆ. ಸಮಾನ ಸಾಂಪ್ರದಾಯವು ಪುಸ್ತಕವನ್ನು ಲೂಕನಿಗೆ ಸಂಬಂಧಿಸಿದೆ. ಅಪೊಸ್ತಲರ ಕೃತ್ಯಗಳು ಎಂಬ ಶಿರೋನಾಮವು, ಮೂಲ ಪುಸ್ತಕದ ಭಾಗವಾಗಿರದೇ ಇರುವಂಥದ್ದು, ತಪ್ಪಾಗಿ ನಡಿಸುವಂಥದ್ದಾಗಿದೆ, ಅದು ಕೆಲವು ಅಪೊಸ್ತಲರ ಕೃತ್ಯಗಳಿಗೆ ಸಂಬಂಧಿಸಿರುತ್ತದೆ. ಬಹಳ ಪುರಾತನ ಕೈಬರಹದ ಪ್ರತಿಗಳಲ್ಲಿ ಒಂದು ಅಪೊಸ್ತಲರ ಕೃತ್ಯಗಳು ಎಂದು ಹೆಚ್ಚು ಉತ್ತಮವಾದ ಶಿರೋನಾಮ ಕೊಡುತ್ತದೆ.

*b. ಪತ್ರಿಕೆಗಳಲ್ಲಿ ಐತಿಹಾಸಿಕ ಸೂಚ್ಯ ಉಲ್ಲೇಖಗಳು.*-ಪತ್ರಿಕೆಗಳು ಸಂಖ್ಯೆಯಲ್ಲಿ ಇಪ್ಪತ್ತೊಂದು ಇರುತ್ತವೆ ಅವುಗಳಲ್ಲಿ ಹದಿಮೂರು ಪೌಲನಿಂದ ಬರೆಯಲ್ಪಟ್ಟಿದೆ.

*c. ಪ್ರಕಟನೆಯ ಗ್ರಂಥ.*-ಇತರ ಅಪೊಸ್ತಲರ ಮರಣ ಹೊಂದಿದ ಬಹಳ ಸಮಯದ ನಂತರ ಅಪೊಸ್ತಲ ಯೋಹಾನನ ಜೀವನದಲ್ಲಿಯ ದೃಶ್ಯಗಳನ್ನು ಇದು ಕೊಡುತ್ತದೆ.

**2. ಸುವಾರ್ತಿಕ ಚರಿತ್ರೆಗೆ ಸಂಬಂಧ.**-

(1) ಸುವಾರ್ತೆಗಳಲ್ಲೆಲ್ಲಾ ಯೋಹಾನ, ಯೇಸು, ಹನ್ನೆರಡು ಜನರು, ಎಪ್ಪತ್ತು ಜನರು, ಹತ್ತಿರವಾಗಿದ್ದ ರಾಜ್ಯವನ್ನು ಪ್ರಸಂಗಿಸಿದರು. ಅಪೊಸ್ತಲರ ಕೃತ್ಯಗಳಲ್ಲಿ ಕ್ರಿಸ್ತನು ಆಳುವುದನ್ನು, ಮತ್ತು ಪುರುಷರು ಹಾಗೂ ಸ್ತ್ರೀಯರು ಆತನ ಸಭೆಯನ್ನು, ಅಥವಾ ರಾಜ್ಯವನ್ನು ಪ್ರವೇಶಿಸುವುದನ್ನು ನೋಡುತ್ತೇವೆ.

(2) ಸುವಾರ್ತೆಗಳಲ್ಲೆಲ್ಲಾ ಸಂದೇಶವು ಮತ್ತು ಕ್ಷೇತ್ರವು ನಿಯಂತ್ರಿಸಲ್ಪಟ್ಟಿತು. ಅಪೊಸ್ತಲರು ಯೇಸುವಿನ ಮರಣ, ಪುನರುತ್ಥಾನ ಅಥವಾ ಮೆಸ್ಸೀಯತ್ವವನ್ನು ಅಥವಾ ಆತನ ಹೆಸರಿನಲ್ಲಿ ಕ್ಷಮಾಪಣೆಯನ್ನು ಪ್ರಸಂಗಿಸಲಿಕ್ಕೆ ಅಧಿಕಾರ ಹೊಂದಿರಲಿಲ್ಲ ಅಥವಾ ಪಲೇಸ್ತಿನನ್ನು ದಾಟಿ ಹೊರಗೆ ಹೋಗಲಿಕ್ಕಿರಲಿಲ್ಲ. ಅಪ್ತೊಲರ ಕೃತ್ಯದಲ್ಲಿ ಅವರು ಎಲ್ಲಾ ದೇಶಗಳಲ್ಲಿ ಕ್ರಿಸ್ತನನ್ನು ಆತನ ವಿಮೋಚನಾ ಕಾರ್ಯದ ಪೂರ್ಣತೆಯಲ್ಲಿ ಪ್ರಸಂಗಿಸುವುದನ್ನು ಮತ್ತು ಆತನ ಹೆಸರಿನಲ್ಲಿ ಪಾಪಗಳ ಪರಿಹಾರವನ್ನು ಕೊಡುವುದನ್ನು ನೋಡುತ್ತೇವೆ.

(3) ಸುವಾರ್ತೆಗಳಲ್ಲಿ ಕ್ರಿಸ್ತನು ತನ್ನ ದಿವಾರೋಹಣ ಹಾಗೂ ಮಹಿಮಾಸ್ಥಿತಿಗೇರಿ

ಸಲ್ಪಟ್ಟದ್ದರ ಪರಿಣಾಮದಂತೆ ಪರಿಶುದ್ಧಾತ್ಮನನ್ನು ವಾಗ್ದಾನ ಮಾಡುತ್ತಾನೆ. ಅಪೊಸ್ತಲರ ಕೃತ್ಯಗಳಲ್ಲಿ ಆತ್ಮನು ಬೆಳಗಿಸುವ ಮತ್ತು ಶುದ್ಧೀಕರಿಸುವ ಶಕ್ತಿಯಿಂದ ಬರುವುದನ್ನು ಮತ್ತು ಪರಿಶುದ್ಧಾತ್ಮನ ಖಡ್ಗದಿಂದ ಸೀಳಲ್ಪಟ್ಟ ಸಾವಿರಾರು ಜನರನ್ನು ನೋಡುತ್ತೇವೆ. ಅಪೊಸ್ತಲರ ಕೃತ್ಯಗಳ ಗ್ರಂಥವು "ಪರಿಶುದ್ಧಾತ್ಮನ ಸುವಾರ್ತೆ" ಎಂದು ಕರೆಯಲ್ಪಡಲು ಯೋಗ್ಯವಾಗಿದೆ.

**3. ಅಪೊಸ್ತಲಿಕ ಚರಿತ್ರೆಯ ಕಾಲಗಳು.**-ಈಗ ಅಪೊಸ್ತಲರ ಕೃತ್ಯಗಳ ಗ್ರಂಥವನ್ನು ನಾವು ಹೊಂದಿಕೊಂಡು, ಚರಿತ್ರೆಯನ್ನು ಈ ಕೆಳಗಿನ ಅವಧಿಗಳಲ್ಲಿ ವಿಭಾಗಿಸುತ್ತೇವೆ:

(1) ಯೆರೂಸಲೇಮಿನಲ್ಲಿ ಸಭೆಯ ಸ್ಥಾಪನೆ ಮತ್ತು ಬೆಳವಣಿಗೆ (ಕ್ರಿ.ಶ. 30-35).[2]

(2) ಯುದಾಯ ಮತ್ತು ಸಮಾರ್ಯಗಳಲ್ಲೆಲ್ಲಾ ಸಭೆಯ ವಿಸ್ತರಣೆ, ಮತ್ತು ಅನ್ಯಜನರ ಬಳಿಗೆ ಹೋದದ್ದು (ಕ್ರಿ.ಶ. 35-45).

(3) ಅನ್ಯರ ಮಧ್ಯದೊಳಗೆ ಪೌಲನ ಮಿಶನರಿ ಪ್ರಯಾಣಗಳು (ಕ್ರಿ.ಶ. 45-58).

(4) ಪೌಲನ ನಾಲ್ಕು ವರ್ಷಗಳ ಸೆರೆವಾಸ (ಕ್ರಿ.ಶ. 58-63).

---

ಟಿಪ್ಪಣಿಗಳು

[1]ಸಭೆಯನ್ನು ಸ್ಥಾಪಿಸುವದಕ್ಕಾಗಿ ಇನ್ನೊಂದು ದಿನಾಂಕ ಕ್ರಿ.ಶ. 33. [2]Ibid.

© 2009 Truth for Today